**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 871/23**

ಸಾಕ್ಷಿಯ ಹೆಸರುಃ ಅಶ್ರಿತ್ ಪ್ರಾಸಾ6

ತಂದೆ /ಗಂಡನ ಹೆಸರು ಃ ಅಶೋಕ್ ಚಾಸಾ7

ವಯಸ್ಸು ಃ **38**

ಉದ್ಯೋಗ ಃ ಕೂಲಿ ಕೆಲಸ

ವಾಸ ಸ್ಥಳ ಃ ಗೊಂದಿಬಸವನಹಳ್ಳಿ ಗ್ರಾಮ , ಕುಶಾಲನಗರ.

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 28.02.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನನಗೆ ಆರೋಪಿ ಪರಿಚಯ ಇರುವುದಿಲ್ಲ. ಈ ಕೇಸಿನ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಪೋಲಿಸರ ಮುಂದೆ ನಾನು ಯಾವುದೆ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ **21** ಎಂದು ಗುರುತಿಸಲಾಯಿತು.

(ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ವಾದ ವಿವಾದ ಆಲಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿದೆ. ಅನುಮತಿಸಿದೆ.)

ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದ

ದಿಃ **04.03.2023** ರಂದು ಚಾಸಾ **2** ರವರು ಕರೆ ಮಾಡಿ ಸೀಗೆಹೊಸೂರು ಗ್ರಾಮದಿಂದ ಅಕ್ರಮವಾಗಿ ಕಸಾಯಿಖಾನೆಗೆ ದನಗಳನ್ನು ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದ್ದು ನಾನು , ಚಾಸಾ **2** ರಿಂದ **6, 8** ಮತ್ತು **9** ರವರು ಬೆಳಗ್ಗೆ **4.00** ಗಂಟೆಗೆ ಸೀಗೆಹೊಸೂರು ಗ್ರಾಮಕ್ಕೆ ಹೋಗಿ ಚಾಸಾ **2** ರವರು **112** ಕ್ಕೆ ಕರೆ ಮಾಡಿ ಪೋಲಿಸರಿಗೆ ವಿಷಯ ತಿಳಿಸಿ ಪೋಲಿಸರು ಸ್ಥಳಕ್ಕೆ ಬಂದಿದ್ದು ಅಷ್ಟರಲ್ಲಿ ಸೀಗೆಹೊಸೂರು ಕಡೆಯಿಂದ ಒಂದು ವಾಹನ ಬಂದಿದ್ದು ಪೋಲಿಸರು

ಅದನ್ನು ಅಡ್ಡ ಹಾಕಿ ನೋಡಿದಾಗ ಅದರಲ್ಲಿ 2 ವ್ಯಕ್ತಿಗಳು ಇಳಿದು ಹೋಡಿ ಹೋಗಿದ್ದು ಅಷ್ಟರಲ್ಲಿ ಪೋಲಿಸರು ವಾಹನ ಚಾಲಕನನ್ನು ಹಿಡಿದು ವಿಚಾರಿಸಿದಾಗ ಆತನ ಹೆಸರು ಈಶ್ವರ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ನಂಬರ್ ಪ್ಲೇಟ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ 3 ಹಸುಗಳು ಮತ್ತು 3 ಕರುಗಳನ್ನು ಹಿಂಸಾತ್ಮಕವಾಗಿ ತುಂಬಿಸಿದ್ದರು ಎಂದರೆ ಸರಿಯಲ್ಲ. ಓಡಿಹೋದವರ ಹೆಸರು ಮೆಹಬೂಬ್ ಮತ್ತು ಶಾವರ್ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಎಸ್ ಐ ರವರು ಸ್ಥಳಕ್ಕೆ ಬಂದು ವಾಹನ ಹಾಗೂ ಜಾನುವಾರುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮುಂದೆ 3 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.